# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 89/2020

P.W:6
C.W:10

**ದಿನಾಂಕ 16.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಬಾಲಾ ರಾಧ್ಯ

**ತಂದೆಯ ಹೆಸರು :** ಲೇಟ್ ಸಿದ್ದಮಲ್ಲಯ್ಯ

**ವಯಸ್ಸು** : 43 ವರ್ಷ

**ವೃತ್ತಿ** : ವಾಟರ್ ಸಪ್ಲೈಯರ್

**ವಾಸಸ್ಥಳ** : ಮಾರನಾಯಕನಪಾಳ್ಯ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**1 ಮತ್ತು 2 ನೇ ಆರೋಪಿಗಳನ್ನು ವಿಸಿ ಮೂಲಕ ಹಾಜರುಪಡಿಸಿದ್ದು ನ್ಯಾಯಾಲಯದ ಕಾರ್ಯ ಕಲಾಪಗಳು ಆಡಿಯೋ ಮತ್ತು ವಿಡಿಯೋ ಮೂಲಕ ಕೇಳಿಸುತ್ತಿರುವ ಮತ್ತು ಕಾಣಿಸುತ್ತಿರುವ ಬಗ್ಗೆ ದೃಡಪಡಿಸಿಕೊಂಡು ಸಾಕ್ಷಿ ವಿಚಾರಣೆ ಪ್ರಾರಂಬಿಸಲಾಯಿತು.**

1. ಚಾ.ಸಾ.11 ಮತ್ತು 12 ಗೊತ್ತು. ಮೃತ ಪಾಲನೇತ್ರಯ್ಯ ಗೊತ್ತು. ಆತ ಕೊಲೆಯಾಗಿ ಮೃತರಾಗಿರುತ್ತಾರೆ. 2020 ರಲ್ಲಿ ಕೊಲೆಯಾಗಿರುತ್ತಾರೆ. ತುಮಕೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ನಾನು ಮೃತ ದೇಹ ನೋಡಿದ್ದೇನೆ. ನಾನು ಮೃತ ದೇಹವನ್ನು ನೋಡಿದಾಗ ಆತನ ತಲೆಗೆ ಏಟಾಗಿತ್ತು.

ನನ್ನೊಂದಿಗೆ ಚಾ.ಸಾ.11, 12, ವೈದ್ಯರು ಮತ್ತು ಪೋಲೀಸರು ಮೃತ ದೇಹದ ಬಳಿ ಇದ್ದರು. ಪೋಲೀಸರು ಮೃತ ದೇಹ ನೋಡಿ ಸ್ಥಳದಲ್ಲಿ ಒಂದು ಬರವಣಿಗೆ ಮಾಡಿ ನನ್ನ ಸಹಿ ಮಾಡಿದ್ದಾರೆ. ಸಾಕ್ಷಿ ಶವ ಪಂಚನಾಮೆ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.10 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.10(ಎ) ಎಂದು ಗುರುತು ಮಾಡಲಾಯಿತು. ಸಾಕ್ಷಿ ಪೋಲೀಸರು ನೀಡಿದ ನೋಟಿಸ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನೋಟೀಸ್ ನ್ನು ನಿ.ಪಿ.11 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತು ಮಾಡಲಾಯಿತು. ನಾನು ಮೃತ ದೇಹ ನೋಡಿದಾಗ ದೇಹದ ಮೇಲೆ ಒಂದು ಶರ್ಟ್ ಮತ್ತು ಪ್ಯಾಂಟ್ ಇತ್ತು. ಶವ ಪಂಚನಾಮೆಯ ವೇಳೆ ಪೋಲೀಸರು ನಮ ಪೋಟೋ ತೆಗೆದಿದ್ದರು. ಸಾಕ್ಷಿ ನಿ.ಪಿ.10 ರ ಪುಟ ಸಂಖ್ಯೆ 1 ಮತ್ತು 4 ರಲ್ಲಿ ಪೋಟೋ ನೋಡಿ ಗುರುತಿಸಿದ್ದು ಪುಟ ಸಂಖ್ಯೆ1 ಮತ್ತು 4 ರ ಪೋಟೋದ ಬಲಭಾಗದಿಂದ ಕಂಡು ಬರುವ 2 ನೇ ವ್ಯಕ್ತಿ ತಾನು ಎಂದು ನೋಡಿ ಗುರುತಿಸಿರುತ್ತಾರೆ. ಪುಟ ಸಂಖ್ಯೆ 3 ರಲ್ಲಿ ಕಂಡು ಬರುವ ಪೋಟೋ ಮೃತ ಪಾಲನೇತ್ರಯ್ಯ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ ಕೆ.ಹೆಚ್.ಜಿ ವಕೀಲರಿಂದ**

2. ನಿ.ಪಿ.10 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಾನು ಮೃತ ದೇಹವನ್ನು ನೋಡಿದಾಗ ನೀಲಿ ಕಲರ್ ಪ್ಯಾಂಟ್ ನೋಡಿದ್ದೆನು, ಶರ್ಟ್

ನೋಡಿದ್ದೆ ಅದರೆ ಬಣ್ಣ ನೆನಪಿಲ್ಲ. ನಿ.ಪಿ.1 ರ ಫೋಟೋದಲ್ಲಿ ಮೃತನ ಮೈಮೇಲೆ ಪ್ಯಾಂಟಿ ಇಲ್ಲ ಎಂದರೆ ಸರಿ. ನಾನು, ಮೃತ ಪಾಲನೇತ್ರಯ್ಯ ಹಾಗೂ ಆತನ ತಂದೆ ಒಂದೇ ಜಾತಿಯವರು. ನನಗೆ ಮೃತ ವ್ಯಕ್ತಿ ಮತ್ತು ಅವರ ಮನೆಯವರು ಆತ್ಮೀಯರು ಮತ್ತು ಪರಿಚಯಸ್ಥರು ಎಂದರೆ ಸರಿಯಲ್ಲ. ನಾನು ಮತ್ತು ಮೃತ ವ್ಯಕ್ತಿ ಒಂದೇ ಜಾತಿಯವರಾದ ಕಾರಣ ಮೃತನ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಸತೀಶ್ ಕುಮಾರ್ ಮತ್ತು ರವಿಕುಮಾರ್ ನಿ.ಪಿ.10 ಕ್ಕೆ ಸಹಿ ಮಾಡಿದೆನು. ನಾನು ಶವ ಪಂಚನಾಮೆಯ ವೇಳೆ 3 ಕಡೆ ಸಹಿ ಮಾಡಿದ್ದೇನೆ. ಟೈಪ್ ಮಾಡಿದ ದಾಖಲಾತಿ ಎಷ್ಟು ಪುಟಗಳಿತ್ತು ಎಂದು ನನಗೆ ನೆನಪಿಲ್ಲ. ನಾನು ನಿ.ಪಿ.10 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 2 ನೇ ಆರೋಪಿ ವಿಸಿ ಮೂಲಕ ಹಾಜರುಪಡಿಸಿದ್ದು ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು.